

# ಬಳಗದ ಬೆಳಕು

## ಹಿರಿಯ ವಿದ್ಯಾರ್ಥಿ ಬಳಗದ ಈ–ಪತ್ರಿಕೆ




ಜನಸೇವಾ ವಿದ್ಯಾಕೇಂದ್ರ
ಹಿರಿಯ ವಿದ್ಯಾರ್ಥಿ ಬಳಗ
**Janaseva Vidyakendra**
Hiriya Vidyarthi Balaga

**ಉದ್ಘಾಟನಾ ಆವೃತ್ತಿ INAUGURAL EDITION - 2022**

# Dr. Keshava Baliram Hedgewar

# ಡಾ. ಕೇಶವ ಬಲಿರಾಮ್ ಹೆಡಗೇವಾರ್



ಓಂ ಗುರುಭ್ಯೋನಮಃ ~ ಜೈ ಶ್ರೀ ರಾಮ್
ಜನಸೇವಾ ವಿದ್ಯಾಕೇಂದ್ರ ಹಿರಿಯ ವಿದ್ಯಾರ್ಥಿ ಬಳಗದ ~ ಈ ಪತ್ರಿಕೆ

# ಬಳಗದ ಬೆಳಕು

Janaseva Vidya Kendra Hiriya Vidyarthi Balaga (Alumni)
Hiriya Vidyarthi Balaga Karayalya, Magadi Main Road, 20th mile, Chanenahalli, Bengaluru 562130

## ಈ ಸಂಚಿಕೆಯಲ್ಲಿ:

1) ಸಂಪಾದಕೀಯ - P3
2) ಡಾಕ್ಟರ್ ಜೀ - P2
3) ಮುನ್ನುಡಿ - P4
4) ಆಚಾರ್ಯ ರಾಮಚಂದ್ರ ಭಟ್ ಕೋಟೆಮನೆಯವರ ಮಾತು -P5
5) ಶ್ರೀ ನಿರ್ಮಲ್ ಕುಮಾರ್ A.S. ರ ಮಾತು - P6
6) ವೇದ ವಿಜ್ಞಾನ ಗುರುಕುಲ - P7
7) ಜನಸೇವಾ ವಿದ್ಯಾಕೇಂದ್ರ ಸ್ವರ್ಣ ಮಹೋತ್ಸವ - ೫೦ ವರ್ಷದ ಸೇವೆಯಲ್ಲಿ - P8
8) ಹೀಗೆ ಸುಮ್ಮನೆ - ಒಂದು ನೆನಪು – P9
9) ಬಳಗದ ಕಟ್ಟೆ - P10
10) ಕಾರ್ಯಕಾರಿ ಸಮಿತಿ - P11
11) ಹಿರಿಯ ವಿದ್ಯಾರ್ಥಿ ಬಳಗದ ಕಾರ್ಯಚಟುವಟಿಕೆ - P12 to P14
12)ವಿಭಾಗೀಯ ಬೈಠಕ್ ಹೊಸಪೇಟೆ –P15
13)ವಿಭಾಗೀಯ ಬೈಠಕ್ ಮೈಸೂರು - P16
14) ಮುಂಬರುವ ಕಾರ್ಯಕ್ರಮಗಳು – P17 to P18
15) ಗುರೂಜೀ - P19
16)ಸೂರ್ಯನಮಸ್ಕಾರ P-20

*ಈ ತ್ರೈಮಾಸಿಕ ಪತ್ರಿಕೆಗೆ*

***'ಬಳಗದ ಬೆಳಕು'***

*ಎಂಬ ಶೀರ್ಷಿಕೆ ನೀಡಿದ ನಮ್ಮ ಪ್ರೀತಿಯ*

***ಶ್ರೀ ರಾಮಚಂದ್ರ ಭಟ್ ಕೋಟೆಮನೆ***

## ಸಂಪಾದಕೀಯ. . . .

ಪ್ರಿಯ ಜನಸೇವಾ ಹಿರಿಯ ವಿದ್ಯಾರ್ಥಿ ಬಳಗದ ಮಿತ್ರರೇ ,

ಹಿರಿಯ ವಿದ್ಯಾರ್ಥಿ ಬಳಗದ 'ಬಳಗದ ಬೆಳಕು' ಈ-ಪತ್ರಿಕೆಯ ಉದ್ಘಾಟನಾ ಸಂಚಿಕೆಗೆ ನಿಮ್ಮೆಲ್ಲರಿಗೂ ಸ್ವಾಗತ. ನಿಮಗೆಲ್ಲರಿಗೂ ತಿಳಿದಿರುವ ಹಾಗೆ ನಮ್ಮ ಜನಸೇವಾ ವಿದ್ಯಾಕೇಂದ್ರಕ್ಕೆ ಸುವರ್ಣ ಮಹೋತ್ಸವ (ಪೂರ್ಣ ಮಂಡಲ) ಹಾಗು ವೇದ ವಿಜ್ಞಾನ ಗುರುಕುಲಕ್ಕೆ ಬೆಳ್ಳಿ ಮಹೋತ್ಸವ (ಅರ್ಧ ಮಂಡಲ). ಸಂಬಂಧ 2021 ರಿಂದ 2022 ರವರೆಗೆ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಕೋವಿಡ್ ಕಾರ್ಮೋಡದ ಮಧ್ಯದಲ್ಲಿಯೂ ಹಿರಿಯ ವಿದ್ಯಾರ್ಥಿ ಬಳಗದ ಸದಸ್ಯರು ಸುವರ್ಣ ಮಹೋತ್ಸವ ಸಂಬಂಧ ಹಮ್ಮಿಕೊಂಡಿರುವ ಕಾರ್ಯಕ್ರಮಗಳನ್ನು ತಮ್ಮ ತಮ್ಮ ವೈಯ್ಯಕ್ತಿಕ ಕಾರ್ಯಗಳ ಮಧ್ಯ ಅತ್ಯಂತ ಯಶಸ್ವಿಯಾಗಿ ನಡೆಸಿಕೊಂಡು ಬಂದಿರುತ್ತಾರೆ. ಈ ಕಾರ್ಯಕ್ರಮದಲ್ಲಿ ಪ್ರತಿನಿಧಿಸಿದ ಎಲ್ಲರೂ ಪ್ರಶಂಸನೆಗೆ ಪಾತ್ರರು.

ಇಲ್ಲಿಯ ವರೆಗೆ ನಡೆದ ಎರಡು ವಿಭಾಗಿಯ ಬೈಟಕ್ (Zonal Meeting) ಗಳು ಬಹು ಯಶಸ್ವಿಯಾಗಿದೆ. ಇದು ನಮ್ಮ ಮೊದಲ ಹೆಜ್ಜೆ.. ಇನ್ನೂ ಬಹು ದೂರ ಸಾಗುವುದಿದೆ.. ಪ್ರತಿ "ಹೆಜ್ಜೆ"ಯ ಸವಿವರವನ್ನು ನಿಮಗೆ ಮುಂಚಿತವಾಗಿ ತಿಳಿಸಲಾಗುವುದು.. ಈ ಭವ್ಯ ಕಾರ್ಯಕ್ರಮದಲ್ಲಿ ನಿಮ್ಮ ಸಹಕಾರ ಹಾಗು ಭಾಗವಹಿಸುವಿಕೆಗೆ ಅತ್ಯಂತ ಕಳಕಳಿಯ ಮನವಿ.

ಎಲ್ಲರಲ್ಲೊಂದು ಮನವಿ.. ನಿಮ್ಮ ಸಂಪರ್ಕದಲ್ಲಿರುವ ಎಲ್ಲ ಜನಸೇವಾ ಹಿರಿಯ ವಿದ್ಯಾರ್ಥಿಗಳ ಹೆಸರು, ವಿಳಾಸ, ಮೊ.ಸಂಖ್ಯೆ, ಬ್ಯಾಚ್ ಇಸವಿ, ಡಿಟೈಲ್ಸ್ ಗಳನ್ನೂ ನಮ್ಮ ಕೋರ್ ಕಮಿಟಿ ಸದಸ್ಯರ ಗಮನಕ್ಕೆ ತನ್ನಿ.

ಇಂತಿ ನಿಮ್ಮ ಸೇವೆಯಲ್ಲಿ

ಹಿ.ವಿ.ಬ (ಹಿರಿಯ ವಿದ್ಯಾರ್ಥಿ ಬಳಗ) ಸಂಪಾದಕೀಯ ವಿಭಾಗ

ಶ್ರೀಧರ ಜೋಯಿಸ್
ನಿಸರ್ಗ ನಾಯಕ್
ರಾಮನಾಥ್ ಬಂಡಾರ್ಕರ್

# ಮುನ್ನುಡಿ

## ಶ್ರೀ ಸುಬ್ರಾಮ ಶ್ರೇಷ್ಠಿ (ಕೋಮರ್ಲ ಗ್ರೂಪ್ ಆಫ್ ಕಂಪನೀಸ್)

## ಪೂರ್ವ ಅಧ್ಯಕ್ಷರು, ಜನಸೇವಾ ವಿಶ್ವಸ್ಥ ಮಂಡಳಿ



ಜನಸೇವಾ ಹಿರಿಯ ವಿದ್ಯಾರ್ಥಿಗಳ ಒಂದು ಆಶಯ ಹಾಗು ಮುಂದಾಳತ್ವದಲ್ಲಿ "ಬಳಗದ ಬೆಳಕು" ಎಂಬ ಈ-ಪತ್ರಿಕೆಯ ಪ್ರಾರಂಭವಾಗಿದೆ. ಇದು ಶುಭ ಸಮಾಚಾರ. ಜನಸೇವಾದಲ್ಲಿ ಓದಿದ ವಿದ್ಯಾರ್ಥಿಗಳು ನಮ್ಮ ರಾಜ್ಯ ಮತ್ತು ದೇಶದಲ್ಲಲ್ಲದೆ ಪ್ರಪಂಚದ ಅನೇಕ ಭಾಗಗಳಲ್ಲಿ ನೆಲೆಸಿದ್ದಾರೆ. ಪ್ರತಿಯೊಬ್ಬ ಹಿರಿಯ ವಿದ್ಯಾರ್ಥಿಗೂ ತನ್ನ ಮಾತೃ ವಿದ್ಯಾ ಸಂಸ್ಥೆಯ ಜೊತೆ ಸಂಪರ್ಕವನ್ನು ಸದಾ ಇಟ್ಟುಕೊಂಡಿರಬೇಕೆಂಬ ಹಂಬಲವಿರುವುದು.

ಕಳೆದ ೫೦ ವರ್ಷಗಳ ಹಾದಿಯಲ್ಲಿ, ಈ ಸಂಸ್ಥೆಯಲ್ಲಿ ಪಡೆದ ಸಂಸ್ಕಾರ ಹಾಗು ಶಿಸ್ತು ಮೈಗೂಡಿಸಿಕೊಂಡಿರುವ ಹಿರಿಯ ವಿದ್ಯಾರ್ಥಿಗಳು ಜಗತ್ತಿನ ಯಾವುದೇ ಭಾಗದಲ್ಲಿದ್ದರೂ ಜನಸೇವಾದ ಬಗ್ಗೆ ಅಪಾರ ಒಲವು ಹಾಗು ಗೌರವ. ಜನಸೇವಾದ ಈ ಪಯಣದಲ್ಲಿ ಮಾಗಡಿ ರಸೆಯಲ್ಲಿ ಪ್ರಾರಂಭವಾದ ಒಂದು ಸಣ್ಣ ಶಾಲೆಯಿಂದ ಹಿಡಿದು ಇತ್ತೀಚಿನ ಬಹು ಅಂತಸ್ತಿನ ಕಟ್ಟಡದ ವರೆಗಿನ ಎಲ್ಲ ಬೆಳವಣಿಗೆಗಳನ್ನು ಹಿರಿಯ ವಿದ್ಯಾರ್ಥಿಗಳು ಗಮನಿಸುತ್ತಾ ಬಂದಿರುತ್ತಾರೆ. ಹಾಗು ಬೆಳವಣಿಗೆಯಲ್ಲಿ ತನು ಮನ ಧನಪೂರಕವಾಗಿ ತಮ್ಮನ್ನು ತೊಡಗಿಸಿಕೊಂಡಿರುತ್ತಾರೆ.

ವ್ಯಯಕ್ತಿಕವಾಗಿ ನನಗೆ ಜನಸೇವಾದ ಸಂಪರ್ಕ ನನ್ನ ತಂದೆಯವರ ಮೂಲಕವಾಯಿತು. ಪ್ರಾರಂಭದ ದಿನದಲ್ಲಿ ನನ್ನ ತಂದೆಯವರು ಶಾಲೆಗೆ ಒಂದು ಹಸುವನ್ನು ದಾನ ಮಾಡಿದ್ದರು. ಆ ದಿನದಿಂದ ಪ್ರಾರಂಭವಾದ ಸಂಬಂಧ ಇಂದಿನವರೆಗೂ ಹಾಗೆ ಚಿರನೂತನ.

ಹೈಸ್ಕೂಲ್ ನಿಂದ ಪ್ರಾರಂಭಗೊಂಡ ಸಂಸ್ಥೆ ಈಗ ಶಿಶುವಿಹಾರ, ಪ್ರಾಥಮಿಕ, ಮಾಧ್ಯಮಿಕ ಹಾಗು ಪದವಿ ಪೂರ್ವ ಕಾಲೇಜ್ ವರೆಗೂ ಬೆಳೆದಿದೆ. ಅದರ ಜೊತೆಗೆ ಭಾರತೀಯ ಗುರುಕುಲ ಶಿಕ್ಷಣದ ಸಂಸ್ಕೃತ ಕೇಂದ್ರಿತ ವಿದ್ಯಾರ್ಜನೆಯನ್ನು ಕೊಡುತ್ತಿದೆ.

ಜನಸೇವಾದ ಎಲ್ಲ ಬೆಳವಣಿಗೆಗಳನ್ನು ಮೂಲೆ ಮೂಲೆಯಲ್ಲಿರುವ ಹಿರಿಯ ವಿದ್ಯಾರ್ಥಿಗಳಿಗೂ ತಲುಪಬೇಕು ಹಾಗು ಹಿರಿಯ ವಿದ್ಯಾರ್ಥಿ ಬಳಗದ ಎಲ್ಲ ಕಾರ್ಯಕ್ರಮಗಳ ಸೂಚನೆ ಮತ್ತು ವಿವರಗಳನ್ನು ಪ್ರತಿಯೊಬ್ಬರಿಗೂ ತಲುಪಬೇಕೆಂಬ ಹಂಬಲದಿಂದ 'ಬಳಗದ ಬೆಳಕು' ಪತ್ರಿಕೆಯನ್ನು ಹಿರಿಯ ವಿದ್ಯಾರ್ಥಿ ಬಳಗದವರಿಂದ ಪ್ರಾರಂಭವಾಗಿದೆ .

ಈ ಒಂದು ಪತ್ರಿಕೆ ಹಿರಿಯ ವಿದ್ಯಾರ್ಥಿ ಮತ್ತು ಜನಸೇವಾ ಸಂಸ್ಥೆಯ ಸ್ಥಿರವಾದ ಕೊಂಡಿಯಾಗಲೆಂದು ನನ್ನ ಮನಃಪೂರ್ವಕ ಹಾರೈಕೆ.

ಎಲ್ಲರಿಗು ಒಳ್ಳೆಯದಾಗಲಿ.

## ಆಚಾರ್ಯ ರಾಮಚಂದ್ರ ಭಟ್ ಕೋಟೆಮನೆಯವರ ಮಾತು




ನಮ್ಮ ಹಿರಿಯ ವಿದ್ಯಾರ್ಥಿ ಬಳಗವು ಕಳೆದ ನಾಲ್ಕು ದಶಕಗಳಿಂದ ತನ್ನ ಚಟುವಟಿಕೆಗಳನ್ನು ನಡೆಸಿಕೊಂಡು ಸದ್ಯ ಐದನೇ ದಶಕದಲ್ಲಿ ಮುನ್ನಡೆಯುತ್ತಿದೆ. ನಮ್ಮ ಈ ಬಳಗಕ್ಕೆ **ಹಿರಿಯ** ಎಂದು ಕರೆದಿದ್ದೇವೆ ಹೊರತು **ಹಳೆಯ** ಎಂದಲ್ಲ. ಅಂದರೆ ಇಲ್ಲಿ ಓದಿದಂತಹ ವಿದ್ಯಾರ್ಥಿಗಳು ಎಷ್ಟೇ ಸಮಯ ಜನಸೇವಾ ಗ್ರಾಮದಲ್ಲಿದ್ದರೂ ಅವರು **ಹಿರಿಯ**ರಾಗಿದ್ದರೇ ಹೊರತು **ಹಳೇಯ**ರಾಗಿಲ್ಲ . ಯಾವಾಗ ಜೀವನದಲ್ಲಿ ಉತ್ಸಾಹ ಶಕ್ತಿ ಕುಂದುವುದೋ ಮನಸ್ಸು ಅಲ್ಲೋಲ ಕಲ್ಲೋಲವಾಗುವುದೋ ಸಂಸಾರ ತಾಪತ್ರಯಗಳಲ್ಲಿ ನಾನಾ ಸಮಸ್ಯೆಗಳು ಎದುರಾಗುವುದೋ ಆಗ ಮನುಷ್ಯ ಬೆಳೆಯುವುದಿಲ್ಲ. ಶಾರೀರಿಕವಾಗಿ ಮಾತ್ರ ಬೆಳವಣಿಗೆ, ಮಾನಸಿಕವಾಗಿ ಕುಗ್ಗಿದಾಗ ಅವನು ಜಗ್ಗು ಕುಗ್ಗು ಹಿಗ್ಗು ಮುಗ್ಗು ಮಧ್ಯದಲ್ಲಿ ಮುಗ್ಗರಿಸುತ್ತ ಇರುತ್ತಾನೆ. ಜೀವನ ಹಾಗಾಗಬಾರದು. ಅವನು ಹಿರಿಯನಾಗಿ ಬೆಳೆಯುತ್ತ ಹೋಗಬೇಕು. ವೇದದಲ್ಲಿ ಹೇಳಿರುವಂತೆ ".. **ಶತಂಜೀವಶರದೋ ವರ್ಧಮಾನಃ** ... ಅರ್ಥ.. ನೂರು ವರುಷ ಬದುಕಿದ್ದ ಮೇಲೂ ಋಷಿಗಳು ನೂರನೇ ವರುಷದಲ್ಲೂ ಬೆಳೆತದ್ದರಂತೆ. ಅಂತಹ ಶರೀರ, ಮನಸ್ಸು ಮತ್ತು ಬುದ್ಧಿ ಯನ್ನು ಹೊಂದಿದ್ದರು ಅಂದರೆ ಅತಿಶಯೋಕ್ತಿಯೇನಲ್ಲ. ನಾವುಗಳು ಕೂಡ ಅಂತಹವರನ್ನು ಪ್ರತ್ಯಕ್ಷ ನೋಡಿದ್ದೇವೆ. ಹಾಗೆ ನಮ್ಮ ಇಲ್ಲಿ ಓದಿದಂತಹ ವಿದ್ಯಾರ್ಥಿಗಳು ತಂತಮ್ಮ ಕ್ಷೇತ್ರಗಳಲ್ಲಿ ಹಿರಿಯರಾಗಿ ಬೆಳೆಯಬೇಕು. ಇದೇ **'ಹಿರಿಯ'** ಪದದ ಹಿಂದಿರುವ ಹೆಗ್ಗುರಿ. ನಮ್ಮಲ್ಲಿ ಅನೇಕ ವಿದ್ಯಾರ್ಥಿಗಳು ಇದನ್ನು ಮಾಡಿ ತೋರಿಸಿದ್ದಾರೆ. ಅವರ ಕ್ಷೇತ್ರವನೇ ಇರಲಿ. ಈಗ ಕೆಲವರು ಐವತ್ತು ದಾಟಿದ್ದರೆ. 1975 ರಲ್ಲಿ ನಮ್ಮ ಪ್ರಥಮ SSLC ಬ್ಯಾಚ್ ಆದ್ದರಿಂದ .. ಎಷ್ಟೋ ವಿದ್ಯಾರ್ಥಿ ಗಳು ಅವರ ಜೀವನದಲ್ಲಿ ಕಷ್ಟಗಳಿಗೆ ಜಗ್ಗದೆ..ಹಿಗ್ಗಿ ಮುನ್ನಡೆದಿದ್ದಾರೆ. ಇದು ನಮಗೆ ಅಭಿಮಾನದ ವಿಷಯ. ನಮ್ಮ ಈ 'ಹಿರಿಯ ವಿದ್ಯಾರ್ಥಿ ಬಳಗ' ದ ಹೆಸರಿನಲ್ಲಿರುವ ಹಾಗೆ.. ನಾವು ಯಾವಾಗಲು ವಿದ್ಯಾರ್ಥಿಗಳಾಗಿ ಮನಸ್ಸನ್ನು ತೆರೆದಿಟ್ಟು ಜ್ಞಾನಾರ್ಥಿಗಳಾಗಿ ಇರಬೇಕೆ ಹೊರತು ಅರ್ಥಾರ್ಥಿಗಳಾಗಲ್ಲ. ವಿದ್ಯಾರ್ಥಿ ಯಾವಾಗಲು ಜ್ಞಾನದ ಬೆಳಕನ್ನು ಬೆಳಗಿಸುತ್ತಿರುತ್ತಾನೆ. ಅರ್ಥಾರ್ಥಿಯು ಸುಖದ ಅಭಾಸದ ಹಿಂದಿದ್ದು ತದನಂತರ 'ವಿಕೃತಿ'ಯ ಉತ್ಪನ್ನಕ್ಕೆ ಕಾರಣವಾಗುತ್ತದೆ. ಹಾಗಾಗಿ ಮನಸ್ಸನ್ನು ಹೊರಗಿನ ಜ್ಞಾನದ ಬೆಳಕಿಗೆ ತೆರೆಯದೆ ಹೋದರೆ ನಾವು ನಿಂತ ನೀರಾಗಿ ಹೋಗುತ್ತೇವೆ. ಹಳೆಯ ವಿಷಯಗಳನ್ನೇ ನಾವು ಜ್ಞಾನವೆಂದು ಪರಿಗಣಿಸುತ್ತೇವೆ. ಹಾಗಾಗಿ ನಾವು ಮಾಗಿ .. ಬಾಗಿ... ಬೆಳೆಯುತ್ತ ಹೋಗಬೇಕು. ಇದೆ **'ಹಿರಿಯ ವಿದ್ಯಾರ್ಥಿ'** ಪದಗಳಲ್ಲಿದೆ. ಕೊನೆಯ ಪದ **'ಬಳಗ'** ಎಂಬುದು ಒಂದೊಳ್ಳೆ ಪದ. ಅದೊಂದು ಭಾವ. ಒಂದು ಪರಿವಾರಕ್ಕೆ ಸೇರಿದವರು.. ಅದು ಜನಸೇವಾ ಎಂಬ ರಾಷ್ಟ್ರೀಯ ಮತ್ತು ಜಗತ್ ಪರಿವಾರಕ್ಕೆ ಸೇರಿರುವವರು. ಈ ಸಂಘದ ಪರಿವಾರ 50 ಎಕರೆ ವಿಸ್ತಾರವಾದ ಪ್ರದೇಶದಲ್ಲಿ ಅನೇಕ ತಪಸ್ಸಿನ ಫಲವಾಗಿ, ಸಂಘದ ಶುಭಾಶಯದ ಕವಚದಿಂದ ಸಮೃದ್ಧವಾಗಿ ಬೆಳೆದು ನಿಂತು, ಈಗ ನೂತನ ಸುಪ್ರಭಾತಕ್ಕಾಗಿ.. ಅರುಣೋದಯಕ್ಕಾಗಿ ಕಾಯ್ತಾಯಿದೆ. ಇನ್ನು ಮುಂದೆ ಹೊಸ ಹೊಸ ಆಯಾಮಗಳ ಚಟುವಟಿಕೆಗಳಿಂದ ಸಮಾಜಕ್ಕೆ , ವಿಶ್ವ ಸಮುದಾಯಕ್ಕೆ ಒಳಿತನ್ನುಮಾಡಲು ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುವುದು. ನಮ್ಮ ಹಿರಿಯ ವಿದ್ಯಾರ್ಥಿಗಳು ದೇಶದ ಮತ್ತು ವಿಶ್ವದ ಅನೇಕ ಭಾಗಗಳಲ್ಲಿ ಅನೇಕ ಸಂಸ್ಥೆಗಳನ್ನು ಕಟ್ಟಿದ್ದಾರೆ.. ಅವರ ಯೋಗದಾನ ಬಹಳ ಮುಖ್ಯ. ಈ ಬಳಗ ತನ್ನ ಹಿರಿತನವನ್ನ ಉಳಿಸಿಕೊಳ್ಳಲಿ , ಜ್ಞಾನದ ಪ್ರಕಾಶವನ್ನು ಹೆಚ್ಚಿಸಿಕೊಳ್ಳಲಿ , ವಿಶ್ವ-ವಿಶಾಲವಾಗಿ ಹರಡಲಿ. ಈಗ ಜನವರಿ 2021 ರಿಂದ ಮುಂದಿನ ಒಂದು ವರ್ಷ ಪೂರ್ಣಮಂಡಲದ ಕಾರ್ಯಕ್ರಮವಿದೆ. ನಾನಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಈಗ ತಾನೇ 81-82 ರ ವಿದ್ಯಾರ್ಥಿಗಳ ವರ್ಚುಯಲ್ ಮೀಟ್ ಹಾಗು 91-92 ರ ವಿದ್ಯಾರ್ಥಿಗಳ ಮಿಲನ ಜನಸೇವಾ ಆವರಣದಲ್ಲಿ ನಡೆಯಿತು. ಇದೊಂದು ಆನಂದಮಯವಾದ ಕ್ಷಣ. ಹೀಗೆಯೇ ಒಂದೊಂದು ಬ್ಯಾಚ್ ಗಳು ಬರಲಿ.. ಅವರ ಆನಂದದ ಕ್ಷಣಗಳ ಅದಾನ ಪ್ರದಾನ ನಡೆಯಲಿ.. ಹಾಗಾಗಿ ಹಿರಿಯ ವಿದ್ಯಾರ್ಥಿ ಬಳಗ ಕೊಡವಿ ಎದ್ದು ಇನ್ನೊಮ್ಮೆ ಯೋಗದಾನಕ್ಕೆ ಸಜ್ಜಾಗಲಿ . ಎಲ್ಲರು ಜನಸೇವಕ್ಕೆ ಬನ್ನಿ.. ಒಟ್ಟಾಗಿ ಆನಂದಿಸೋಣ.. ಒಟ್ಟಾಗಿ ಕೈ ಜೋಡಿಸೋಣ.. ಸ್ವಾಗತ..

ಓಂ ಗುರುಭ್ಯೋನಮಃ ~ ಜೈ ಶ್ರೀ ರಾಮ್
ಜನಸೇವಾ ವಿದ್ಯಾಕೇಂದ್ರ ಹಿರಿಯ ವಿದ್ಯಾರ್ಥಿ ಬಳಗದ ~ ಈ ಪತ್ರಿಕೆ

ಬಳಗದ ಬೆಳಕು

Janaseva Vidya Kendra Hiriya Vidyarthi Balaga (Alumni)

Hiriya, Vidyarthi Balaga Karayalya, Magadi Main Road, 20th mile, Chanenahalli, Bengaluru 562130

## ಗೌರವ ಕಾರ್ಯದರ್ಶಿಗಳಾದ ನಮ್ಮೆಲ್ಲರ ಪ್ರೀತಿಯ ಶ್ರೀ ನಿರ್ಮಲ್ ಜಿ ಯವರ ಮಾತು ....



ಆತ್ಮೀಯ ಹಿರಿಯ ವಿದ್ಯಾರ್ಥಿ ಮಿತ್ರರೇ, ಉತ್ತಮ ಪ್ರಜೆಗಳು ದೇಶದ ಸಂಪತ್ತು . ಸಾಮಾಜಿಕ ದೃಷ್ಟಿಯುಳ್ಳ ನಿಷ್ಠರಾದ ಸದೃಢ ಯುವ ಜನಾಂಗವೇ ಇಂದಿನ ಅವಶ್ಯಕತೆ. ಜನಸೇವಾ ವಿದ್ಯಾಕೇಂದ್ರವು ಉತ್ತಮ ಶಿಕ್ಷಣದ ಮೂಲಕ ವ್ಯಕ್ತಿಯ ಸರ್ವಾಂಗೀಣ ವಿಕಾಸವಾಗಬೇಕೆಂಬ ಹಂಬಲದೊಂದಿಗೆ ನಿಮಗೆಲ್ಲ ಗೊತ್ತಿರುವ ಹಾಗೆ ಕಳೆದ 46 ವರ್ಷಗಳಿಂದ ಕಾರ್ಯನಿರತವಾಗಿದೆ. ಜನಸೇವಾ ಆವರಣ ಈಗ ಸಮಕಾಲೀನ ಶಿಕ್ಷಣದ ವ್ಯವಸ್ಥೆಯ ಜೊತೆಗೆ, ಗುರುಕುಲ ಶಿಕ್ಷಣದ ಕೇಂದ್ರವು ಆಗಿದೆ. ಸಂಘದ ಅನೇಕ ಹಿರಿಯರ ತಪಸ್ಸು ತ್ಯಾಗದ ಹೆಗ್ಗುರುತು ನಮ್ಮ ಈಗಿನ ಜನಸೇವಾ. ಈ ಬೆಳವಣಿಗೆಯಲ್ಲಿ ನಮ್ಮ ಹಿರಿಯ ವಿದ್ಯಾರ್ಥಿಗಳ ಪಾತ್ರ ಬಹು ದೊಡ್ಡದು. ಅನೇಕ ಹಿರಿಯ ವಿದ್ಯಾರ್ಥಿಗಳು ತಮ್ಮ ಓದಿನ ನಂತರ ಅವರವರ ಕ್ಷೇತ್ರಗಳಲ್ಲಿ ಅವರದೇ ಆದ ಛಾಪನ್ನು ಮೂಡಿಸಿರುವರು. ಹಿರಿಯ ವಿದ್ಯಾರ್ಥಿ ಬಳಗ ನಮ್ಮೆಲ್ಲರ ಹೆಮ್ಮೆ ಹಾಗು ಬಹು ದೊಡ್ಡ ಅಸ್ತಿ ಎಂದರೆ ಅತಿಶಯೋಕ್ತಿಯಲ್ಲ. ನಮ್ಮೆಲ್ಲರ ಆಶಯ ಒಂದೇ .. ಹಿರಿಯ ವಿದ್ಯಾರ್ಥಿ ಬಳಗ ಇನ್ನಷ್ಟು ಬಲಶಾಲಿಯಾಗಿ ಬೆಳೆಯಬೇಕು ಹಾಗು ಭವಿಷ್ಯದ ಎಲ್ಲಾ ಅಭಿವೃದ್ಧಿಯಲ್ಲಿ ತನ್ನನ್ನು ತೊಡಗಿಸಿಕೊಳ್ಳಬೇಕು.

ಜನಸೇವಾ ಕೇಂದ್ರವು ಈಗ **ಪೂರ್ಣಮಂಡಲದ** ಉತ್ಸವಕ್ಕೆ ಸಜ್ಜಾಗುತ್ತಿದೆ. ಇದರ ಜೊತೆಗೆ 'ವೇದ ವಿಜ್ಞಾನ ಗುರುಕುಲವು '**ಅರ್ಧಮಂಡಲ**' ದ ಹೊಸ್ತಿಲಲ್ಲಿದೆ. ನಮ್ಮೆಲ್ಲರ ಮುಂದಿರುವ ಗುರಿ ಈ ಎರಡು ಕಾರ್ಯಕ್ರಮಗಳನ್ನು ಉತ್ತಮ ರೀತಿಯಲ್ಲಿ ನಡೆಸುವುದು. ವರ್ಷ 2021 ರಿಂದ 2022 ರ ವರೆಗೆ ಪೂರ್ತಿ ವರ್ಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಈ ಕಾರ್ಯಕ್ರಮದ ನಿರೂಪಣೆಯಲ್ಲಿ ಬಳಗದ ಸಹಕಾರವು ಬಹಳ ಮುಖ್ಯ. ನಿಮ್ಮೆಲ್ಲರ ಸಹಕಾರ ಅತ್ಯವಶ್ಯಕ.

ನಮ್ಮ ಈ ಕಾರ್ಯಕ್ರಮಗಳಿಗೆ ಸದಾ ಪ್ರೋತ್ಸಾಹ ನೀಡುತ್ತಾ ಬಂದಿರುವ ನಮ್ಮೆಲ್ಲರ ಹಿರಿಯ ವಿದ್ಯಾರ್ಥಿಗಳಿಗೆ ಮತ್ತು ಅವರ ಪೋಷಕ ಹಿತೈಷಿ ಬಂಧುಗಳಿಗೆ ನಾವು ಎಂದಿಗೂ ಅಭಾರಿ.

# ವೇದ ವಿಜ್ಞಾನ ಗುರುಕುಲ, ಚೆನ್ನೇನಹಳ್ಳಿ


















# ಜನಸೇವಾ ವಿದ್ಯಾಕೇಂದ್ರ ಸ್ವರ್ಣ ಮಹೋತ್ಸವ
# ೫೦ ವರ್ಷದ ಸೇವೆಯಲ್ಲಿ

ಜನಸೇವಾ ವಿದ್ಯಾಕೇಂದ್ರವು **1972** ರಲ್ಲಿ ಪ್ರಾರಂಭವಾಗಿ, ನಾನಾ ಆಯಾಮಗಳ ನೆಲೆಯಲ್ಲಿ ಯಶಸ್ವಿ ಸಮಾಜಮುಖಿ ಕಾರ್ಯಕ್ರಮಗಳ ಮುಖೇನ ತನ್ನ ಸ್ವರ್ಣ ಮಹೋತ್ಸವದ ಹೊಸ್ತಿಲಲ್ಲಿ ಪ್ರಕಾಶಿಸುತ್ತಿದೆ. ರಾಷ್ಟ್ರೀಯ ಸ್ವಯಂಸೇವಕ ಸಂಘದ ಹಿರಿಯರ ಪ್ರೇರಣೆ ಮತ್ತು ಸಮಾಜದ ಕೊಡುಗೆಯಿಂದ, ಜನಸೇವಾ ಪ್ರಾರಂಭದಿಂದಲೂ ವಿದ್ಯೆ, ನಾಡು, ನುಡಿ, ಸಂಸ್ಕಾರ, ಭಾರತೀಯ ಪರಂಪರೆ ಹಾಗು ದೇಶದ ಚಿಂತನೆಯನ್ನು ತನ್ನ ವಿದ್ಯಾರ್ಥಿಗಳಲ್ಲಿ ಬಿತ್ತಿಸುವ ಪ್ರಯತ್ನ ಮಾಡುತ್ತಿದೆ.

"ಕೆರೆಯ ನೀರನು ಕೆರೆಗೆ ಚೆಲ್ಲಿ... " ಎಂಬ ದಾಸರ ಸಾಲುಗಳಿಗನುಗುಣವಾಗಿ,ಸಮಾಜದಿಂದ ಶುರುವಾದ ಈ ಸಂಸ್ಥೆ ಸಮಾಜಕ್ಕೆ ಪುನಃ ಕೊಡುಗೆಯನ್ನು ನೀಡುತ್ತಾ ಬಂದಿದೆ.

ವಿದ್ಯಾಲಯದಿಂದ ಪ್ರಾರಂಭವಾದ ಜನಸೇವಾ ಅದರ ವ್ಯಾಪ್ತಿಯನ್ನು ಸಮಾಜದ ಅನೇಕ ಆಯಾಮಗಳಿಗೆ ವಿಸ್ತರಿಸಿಕೊಂಡಿದೆ. ಶಿಶುಭಾರತಿಯಿಂದ ಮೊದಲುಗೊಂಡು ಪದವಿಪೂರ್ವ ಶಿಕ್ಷಣದ ವರೆಗೆ ವಿದ್ಯಾರ್ಜನೆಗೆ ಅವಕಾಶವಿದೆ. ಆಧುನಿಕ ಪಠ್ಯವನ್ನು ಭೋಧಿಸುವುದರ ಜೊತೆಗೆ ಭಾರತೀಯ ಪರಂಪರೆ ಹಾಗು ಸಂಸ್ಕಾರದ ಅಡಿಪಾಯವನ್ನು ವಿದ್ಯಾರ್ಥಿಗಳಲ್ಲಿ ಹಾಕುತ್ತಿದೆ.

ಇದರ ಇನ್ನೊಂದು ವಿಶಿಷ್ಟ ಹಾಗು ಯಶಸ್ವಿ ಪ್ರಯೋಗವಾದ 'ವೇದ ವಿಜ್ಞಾನ ಗುರುಕುಲ'ವು ಭಾರತೀಯ ಗುರುಕುಲೀಯ ಪದ್ದತಿಯ ಆಧಾರದ ಮೇಲೆ ನಡೆಯುತ್ತಾ ಇಡೀ ವಿಶ್ವವನ್ನು ತನ್ನತ್ತ ಸೆಳೆಯುತ್ತಿದೆ.

ಈ ಸಂಸ್ಥೆಯ ಶ್ರೇಯೋಭಿವೃದ್ಧಿಯ ಹಿಂದೆ ಅನೇಕ ಮಹನೀಯರ ಕೊಡುಗೆ ಮತ್ತು ತ್ಯಾಗವಿದೆ. ಈಗಲೂ ಸರ್ವಸ್ವನ್ನು ಧಾರೆಯೆರೆದು ಕೆಲಸ ಮಾಡುತ್ತಿರುವ ಜೀವಗಳಿವೆ. ಇಂತಹ ಸಂಸ್ಥೆಯಲ್ಲಿ ಸಂಸ್ಕಾರವನ್ನು ಪಡೆದ ನಾವುಗಳು ಪುಣ್ಯವಂತರು ಹಾಗು ಹಿರಿಯ ವಿದ್ಯಾರ್ಥಿಗಳಾಗಿ ನಾವು ಅತ್ಯಂತ ಹೆಮ್ಮೆ ಪಡಬೇಕಾದ ವಿಷಯ.

ಸಮಾಜಸೇವೆಯಲ್ಲಿ ಸಮರ್ಪಿಸಿಕೊಳ್ಳುತ್ತ **50** ರ ಸ್ವರ್ಣ ಮಹೋತ್ಸವಕ್ಕೆ ಕಾಲಿಡುತ್ತಿರುವ ಈ ನಮ್ಮ ಜನಸೇವಾ 'ನಮ್ಮ ಹೆಮ್ಮೆ'. ಹಿರಿಯ ವಿದ್ಯಾರ್ಥಿಗಳಾದ ನಾವು ಈ ಸುಸಂದರ್ಭದಲ್ಲಿ ಪಾಲ್ಗೊಳ್ಳೋಣ. ನಮ್ಮ ಅಲ್ಪ ಸ್ವಲ್ಪ ಸಮಯವನ್ನು ಈ ಮಾತೃ ಸಂಸ್ಥೆಯ ಕಾರ್ಯಕ್ರಮಕ್ಕೆ ಕೊಡೋಣ.

**ಇಂತಿ ನಿಮ್ಮ ಸೇವೆಯಲ್ಲಿ**

***ಹಿ.ವಿ.ಬ (ಹಿರಿಯ ವಿದ್ಯಾರ್ಥಿ ಬಳಗ)***

## "ಹೀಗೆ ಸುಮ್ಮನೆ" ~ ಒಂದು ಸವಿನೆನಪು



ಇದು 1974 ರಲ್ಲಿ ನಡೆದ ಘಟನೆ. ಆಗ ನಾನು ಬೆಂಗಳೂರಿನ ಜನಸೇವಾ ವಿದ್ಯಾ ಕೇಂದ್ರದಲ್ಲಿ ಹೈಸ್ಕೂಲ್ ನಲ್ಲಿ ಓದುತ್ತಿದ್ದೆ. ಹೆಸರಿಗೆ ಬೆಂಗಳೂರು ಅಂತ ಇದ್ದರೂ, ಈ ವಸತಿಶಾಲೆ ಇದ್ದುದು ಹೊರವಲಯದ ಚೆನ್ನೇನಹಳ್ಳಿಯಲ್ಲಿ. ನಲವತ್ತು ಎಕರೆ ವಿಸ್ತಾರವಾದ ಜಾಗದ ಮಧ್ಯೆ ಶಾಲೆ-ಹಾಸ್ಟೆಲ್ ಕಟ್ಟಡ ಮತ್ತು ಪ್ರಾರ್ಥನಾ ಕುಟೀರ ಬಿಟ್ಟರೆ.. ಉಳಿದಂತೆ ನಿರ್ಜನ ಪ್ರದೇಶ.. ಇಲ್ಲ ಅಂತ ಹೇಳುವುದಕ್ಕೆ ಕಾಂಪೌಂಡ್ ಹೊರಗೆ ಒಂದು ಗೂಡ್ಅಂಗಡಿ.. ಆದರೆ ಅದು ಆಟಕ್ಕೆ ಉಂಟು ಲೆಕ್ಕಕ್ಕೆ ಇಲ್ಲ.. ಅಷ್ಟೇ!

ಆಗಿನ ಕಾಲದ ಅಲ್ಲಿನ ಅಕ್ಟೋಬರ್ ಚಳಿಯನ್ನು ಈಗಿನ ಚಳಿಯೊಂದಿಗೆ ಹೋಲಿಸಿದರೆ, ಈಗದ್ದು ಚಳಿಯೇ ಅಲ್ಲ. ಕರಾವಳಿಯಿಂದ ಹೋದವರಿಗಂತೂ ಹೊಸ ಅನುಭವ. ಮೈದಾನ ಪ್ರದೇಶದಲ್ಲಿ ಒಂದೇ ಸಮನೆ ಬೀಸುವ ಮೈ ಕೊರೆಯುವ ಚಳಿಗೆ ಬೆಳಿಗ್ಗೆ 5 ಗಂಟೆಗೆ ಎದ್ದು ಕಡು ತಣ್ಣಗಿನ ನೀರಿನಲ್ಲಿ ನಿತ್ಯ ಕರ್ಮಮುಗಿಸಿ ಪ್ರಾರ್ಥನೆಗೆ ಹೋಗಬೇಕು.. ಮನೆಯಲ್ಲಿ ಬೆಳಿಗ್ಗೆ ಏಳು ಗಂಟೆ ಆದರೂ ಏಳದವರಿಗೆ ಮಂಜುಗಟ್ಟುವ ಚಳಿಯಲ್ಲಿ ಇನ್ನೂ ಕತ್ತಲು ಇರುವಾಗ ಏಳುವ ಶಿಕ್ಷೆ ಯಾರಿಗೆ ಬೇಕು? ಏಳದಿದ್ದರೆ ಬೆಳಗಿನ ಉಪಹಾರ ಖೋತಾ.. ಏಳುವ ಮನಸ್ಸು ಮಾಡಿದರೂ ದೇಹ ಕೇಳಬೇಕಲ್ಲ? ಹಾಗೋ ಹೀಗೋ ಮಾಡಿ ಎದ್ದು ಕುಟೀರಕ್ಕೆ ಬಂದು ಕುಳಿತುಕೊಳ್ಳುತ್ತಿದ್ದೆ..

ಒಮ್ಮೆ ಮಂದಿರದಲ್ಲಿ ಬಂದು ಕುಳಿತ ಮೇಲೆ ವಾತಾವರಣ ಬದಲಾಗುತ್ತಿತ್ತು.. ಬೆಳಗಿನ ಜಾವದ ಪ್ರಶಾಂತ ವಾತಾವರಣ.. ಒಬ್ಬರಿಗೊಬ್ಬರು ಕಾಣದಷ್ಟು ಕತ್ತಲೆ.. ಮಂದವಾದ ದೀಪದ ಬೆಳಕಿನಲ್ಲಿ ಎದುರು ಒಂದೆಡೆ ಭಾರತಮಾತೆ..ಇನ್ನೊಂದೆಡೆ ಆಳೆತ್ತರದ ಸ್ವಾಮಿ ವಿವೇಕಾನಂದರು.. ಮಧ್ಯೆ ವಿದ್ಯಾದಾಯಿನಿ ಶಾರದೆ.. ಶ್ರೀಮಂತ ಕಂಠದಿಂದ ಹೊರಡುವ ಪ್ರಾಥಃಸ್ಮರಣೆ.. ಓಂಕಾರ.. ಮತ್ತೆ ಮೌನ..

ಆ ಸಂಪೂರ್ಣ ಮೌನದಲ್ಲಿ ಕಣ್ಣು ಮುಚ್ಚಿ ಧ್ಯಾನದಲ್ಲಿ ಮುಳುಗಿ ಹೋಗಿದ್ದೆ.. ಸುತ್ತಲೂ ಕತ್ತಲು.. ಇದ್ದಕ್ಕಿದ್ದಂತೆ ಆ ಅವರ್ಣಣೀಯ ಸ್ಥಿತಿಯಲ್ಲಿ ಪ್ರಖರ ಬೆಳಕು ಒಂದು ಕಂಡಿತು.. ತಪಸ್ವಿಗಳಿಗೆ ಕಾಣುವ ಜ್ಞಾನದ ಬೆಳಕು ಇಷ್ಟು ಬೇಗ ನನಗೆ ಸಿಕ್ಕಿತೇ..ಕಣ್ಣು ತೆರೆದು ನೋಡಲು ಧೈರ್ಯ ಬರಲಿಲ್ಲ.. ಆದರೂ ಅರೆಕಣ್ಣಲ್ಲಿ ನೋಡಿದರೆ.. ಹಾಸ್ಟೆಲ್ ವಾರ್ಡನ್ ದೊಡ್ಡ ಟಾರ್ಚ್ ಹಿಡಕೊಂಡು ನಾನು ನಿದ್ದೆ ಮಾಡಿದ್ದೇನೋ ಅಥವಾ ಧ್ಯಾನದಲ್ಲಿ ಇದ್ದೇನೋ ಅಂತ ಕಣ್ಣಿಗೆ ಲೈಟ್ ಹಾಕಿ ನೋಡುತ್ತಿದ್ದರು.. ಅಷ್ಟೇ!

- **ಶ್ರೀ. ಪ್ರತಾಪಸಿಂಹ ನಾಯಕ್**
**ಹಿರಿಯ ವಿದ್ಯಾರ್ಥಿ (1974 - 75) ವಿದ್ಯಾಕೇಂದ್ರದ ಮೊದಲ ವರ್ಷ ಹಾಗು ಬಿಜೆಪಿ** MLC

## *Balagada Katte ... ಬಳಗದ ಕಟ್ಟೆ ....*



Bhagavad Geeta Discourse
Chapter—6 Verses 6

ಬಂಧುರಾತ್ಮಾತ್ಮನಸ್ತಸ್ಯ ಯೇನಾತ್ಮೈವಾತ್ಮನಾ ಜಿತಃ |
ಅನಾತ್ಮನಸ್ತು ಶತ್ರುತ್ವೇ ವರ್ತೇತಾತ್ಮೈವ ಶತ್ರುವತ್ ||

*bandhur ātmātmanas tasya yenātmaivātmanā jita*
*anātmanas tu śhatrutve vartetātmaiva śhatru-vat*

**If you have your mind under your control, understand that it is your friend. If you feel it is not under your control then take it as your enemy.**

This is the central teaching. You assess for yourself whether your mind is under your control or not. If the mind is your friend you are progressing in life. It depends on whether you have conquered your mind. Don't ever surrender. Get all the training tools you can. Develop your will power and undertake fast to control your senses. You have put restrictions on your senses. If you are able to do this, your mind will be under your control. Undertake a vow to do a JAPA As you keep on chanting the Mantra the mind might try to dissuade you, but if you continue, the mind will be under your control. Then take up austerity like feeding poor on one particular day. You go and ensure that you do the job. So you are in perfect control. Situations come in life; they need not always be favourable as far as you can control your mind you can make things work.

**Article By**

**Sri. Srinivasa Sirigeri ,**

**Old Student. 76-77-Batch.**

ವಿದ್ಯಾಶ್ರೀ

## ಜನಸೇವಾ ಹಿರಿಯ ವಿದ್ಯಾರ್ಥಿಗಳ ಬಳಗ 2021-2022

### ಕಾರ್ಯಕಾರಿ ಸಮಿತಿ

| | | |
|---|---|---|
| ಶ್ರೀ ರಾಜೇಂದ್ರಪ್ಪ . ಪಿ . ವೈ | – | ಗೌರವ ಅಧ್ಯಕ್ಷರು |
| ಶ್ರೀ ರುದ್ರಮೂರ್ತಿ ಎಂ. | – | ಅಧ್ಯಕ್ಷರು |
| ಶ್ರೀ ಜಯಂತಿ ಶ್ರೀ ನಾಗೇಶ್ | – | ಕಾರ್ಯಕಾರಿಣಿ ಅಧ್ಯಕ್ಷರು |
| ಶ್ರೀ ಸಿದ್ದೇಶ್. ಆರ್ . | – | ಉಪಾಧ್ಯಕ್ಷರು |
| ಶ್ರೀ ರಾಜು . ಎಸ್. ವಿ. | – | ಉಪಾಧ್ಯಕ್ಷರು |
| ಶ್ರೀ ಮಹೇಂದ್ರಗೌಡ. ಜಿ | – | ರಾಜ್ಯ ಕಾರ್ಯದರ್ಶಿ |
| ಶ್ರೀ ಜಗದೀಶ್ ಪ್ರಸಾದ್ . ಸಿ. ಕೆ | – | ರಾಜ್ಯ ಕಾರ್ಯದರ್ಶಿ |
| ಶ್ರೀ ಶ್ರೀಧರ್ ಜೋಯಿಸ್ | – | ಖಜಾಂಜಿ |
| ಶ್ರೀ ಆನಂದ ದೇಸಾಯಿ | – | ಸಹ ಖಜಾಂಜಿ |
| ಶ್ರೀ ನಿಸರ್ಗ ಬಿ ನಾಯಕ್ | – | ಕಾರ್ಯಾಲಯ ಕಾರ್ಯದರ್ಶಿ |
| ಶ್ರೀ ರಾಜಾರಾಂ ಭಟ್ | – | ಸಹ ಕಾರ್ಯಾಲಯ ಕಾರ್ಯದರ್ಶಿ |
| ಶ್ರೀ ಕೃಷ್ಣಪ್ಪ .ಹೆಚ್.ಎಲ್. | – | ಬೆಂಗಳೂರು ನಗರ ಅಧ್ಯಕ್ಷರು |


–ಶ್ರೀ ರಾಜು. ಎಸ್, ಹಿರಿಯ ವಿದ್ಯಾರ್ಥಿ ಬಳಗದ ಸಂಯೋಜಕರು

# ಹಿರಿಯ ವಿದ್ಯಾರ್ಥಿ ಬಳಗದ ಕಾರ್ಯಚಟುವಟಿಕೆಗಳು



**14May2020** - ಜನಸೇವಾ ಹಿರಿಯ ವಿದ್ಯಾರ್ಥಿ ಬಳಗದ ಕಾರ್ಯಾಲಯ ಉದ್ಘಾಟನಾ ಪೂಜಾ ಕೈಂಕರ್ಯವನ್ನು ಶ್ರೀ ರಾಮಚಂದ್ರ ಭಟ್ ಕೋಟೆಮನೆ ಅವರ ಮಾರ್ಗದರ್ಶನದಲ್ಲಿ ಮತ್ತು ಶ್ರೀ ನಿರ್ಮಲಜೀ ಮತ್ತು ಶ್ರೀ ಈಶ್ವರ ಭಟ್ ಅವರ ಉಪಸ್ಥಿತಿಯಲ್ಲಿ ನೆರವೇರಿತು.

**14May2020** - ಅದೇ ಶುಭದಿನದಂದು ಹಿರಿಯ ವಿದ್ಯಾರ್ಥಿ ಬಳಗದ ಅಲ್ಯೂಮಿನಿ ಕೋರ್ ಕಮಿಟಿ ಯನ್ನು ಪುನರ್ಘಟಿಸಲಾಯಿತು



ಜನಸೇವಾ ಹಿರಿಯ ವಿದ್ಯಾರ್ಥಿಗಳ ಬಳಗ 2021-2022

ಕಾರ್ಯಕಾರಿ ಸಮಿತಿ

| | | |
|---|---|---|
| ಶ್ರೀ ರಾಜೇಂದ್ರಪ್ಪ . ಪಿ . ವೈ | — | ಗೌರವ ಅಧ್ಯಕ್ಷರು |
| ಶ್ರೀ ರುದ್ರಮೂರ್ತಿ ಎಂ. | — | ಅಧ್ಯಕ್ಷರು |
| ಶ್ರೀ ಜಯಂತಿ ಶ್ರೀ ನಾಗೇಶ್ | — | ಕಾರ್ಯಕಾರಿಣಿ ಅಧ್ಯಕ್ಷರು |
| ಶ್ರೀ ಸಿದ್ದೇಶ್. ಆರ್ . | — | ಉಪಾಧ್ಯಕ್ಷರು |
| ಶ್ರೀ ರಾಜು . ಎಸ್. ವಿ. | — | ಉಪಾಧ್ಯಕ್ಷರು |
| ಶ್ರೀ ಮಹೇಂದ್ರಗೌಡ. ಜಿ | — | ರಾಜ್ಯ ಕಾರ್ಯದರ್ಶಿ |
| ಶ್ರೀ ಜಗದೀಶ್ ಪ್ರಸಾದ್ . ಸಿ. ಕೆ | — | ರಾಜ್ಯ ಕಾರ್ಯದರ್ಶಿ |
| ಶ್ರೀ ಶ್ರೀಧರ್ ಜೋಯಿಸ್ | — | ಖಜಾಂಚಿ |
| ಶ್ರೀ ಆನಂದ ದೇಸಾಯಿ | — | ಸಹ ಖಜಾಂಚಿ |
| ಶ್ರೀ ನಿಸರ್ಗ ಬಿ ನಾಯಕ್ | — | ಕಾರ್ಯಾಲಯ ಕಾರ್ಯದರ್ಶಿ |
| ಶ್ರೀ ರಾಜಾರಾಂ ಭಟ್ | — | ಸಹ ಕಾರ್ಯಾಲಯ ಕಾರ್ಯದರ್ಶಿ |
| ಶ್ರೀ ಕೃಷ್ಣಪ್ಪ .ಹೆಚ್.ಎಲ್. | — | ಬೆಂಗಳೂರು ನಗರ ಅಧ್ಯಕ್ಷರು |

—ಶ್ರೀ ರಾಜು. ಎಸ್, ಹಿರಿಯ ವಿದ್ಯಾರ್ಥಿ ಬಳಗದ ಸಂಯೋಜಕರು

ಮಾರ್ಗದರ್ಶಿ ಮಂಡಳಿ

ಶ್ರೀ ಡಾ. ರಾಮಚಂದ್ರ ಜಿ ಭಟ್
ಶ್ರೀ ಶಂಕರನಾಯಕ್
ಶ್ರೀ ದ.ಹ. ಬಾಲಕೃಷ್ಣ
ಶ್ರೀ ಗಜಾನನ ಹೆಗ್ಡೆ
ಶ್ರೀ ಶ್ರೀನಿವಾಸ ಮೂರ್ತಿ

ಹಿರಿಯ ವಿದ್ಯಾರ್ಥಿ ಬಳಗದಿಂದ ಬೆಂಗಳೂರು ನಗರದಲ್ಲಿ ನಡೆದ ಪುನರ್ಮಿಲನ ಸಮಾವೇಶ



ಜನಸೇವಾ ವಿದ್ಯಾಕೇಂದ್ರದ ಸ್ವರ್ಣ ಮಹೋತ್ಸವ ಹಾಗು ವೇದ ವಿಜ್ಞಾನ ಗುರುಕುಲದ ಬೆಳ್ಳಿ ಮಹೋತ್ಸವ ಸಂಬಂಧ ಹಿರಿಯ ವಿದ್ಯಾರ್ಥಿ ಬಳಗದ ಪುನರ್ ರಚನೆಗೆ ಚಾಲನೆ

**3 August 2020** - ಪ್ರೊ. ಡಾ.ರಾಮಚಂದ್ರ ಗಣಪತಿ ಭಟ್ ಹಾಗೂ ಶ್ರೀ ನಿರ್ಮಲ್ ಕುಮಾರ್ ಅವರು ರಕ್ಷಾಬಂಧನದ ಸಂದೇಶ.




# ಹಿರಿಯ ವಿದ್ಯಾರ್ಥಿ ಬಳಗದ ಕಾರ್ಯಚಟುವಟಿಕೆಗಳು



**31 March 2020 - ಲಾಕ್ ಡೌನ್ ಘೋಷಣೆ ಮಾಡಿರುವ ವಿಚಾರ ನಮಗೆಲ್ಲಾ ತಿಳಿದಿದೆ,ಈ ಮಧ್ಯೆ ಅದೆಷ್ಟೋ ಕೂಲಿ ಕಾರ್ಮಿಕರಿಗೆ ಕೆಲಸಕ್ಕೆ ಹೋಗಲು ಸಾಧ್ಯವಾಗದೇ ಊಟಕ್ಕೂ ತೊಂದರೆ ಅನುಭವಿಸುತ್ತಿದ್ದಾರೆ, ಇದನ್ನು ಮನಗಂಡ ಜನಸೇವಾ ವಿದ್ಯಾಕೇಂದ್ರ ಸುತ್ತಮುತ್ತಲಿನ ನೂರಾರು ಕೂಲಿ ಕಾರ್ಮಿಕರಿಗೆ ಅಕ್ಕಿ, ಬೆಳೆ, ರವೆ, ಅಡುಗೆಎಣ್ಣೆ, ಉಪ್ಪು ಇತರೆ ಆಹಾರ ಪದಾರ್ಥಗಳನ್ನು ವಿತರಿಸಲು ಪ್ರಾರಂಭಿಸಿದೆ, ಸೇವಾ ಹಿ ಪರಮೋ ಧರ್ಮ**

**26Dec2020 - ಜನಸೇವಾ ವಿದ್ಯಾಕೇಂದ್ರ ಸ್ವರ್ಣ ಜಯಂತಿ ಪ್ರಯುಕ್ತ ಒಂದು ಚಿಕ್ಕ ಸಾಕ್ಷಿ ಚಿತ್ರ**






**3 October 2021 -**
**ಶ್ರೀ ಜಗದೀಶ್ GR, ವಿದ್ಯಾಭಾರತಿ ಅವರ ಅಧ್ಯಕ್ಷತೆಯಲ್ಲಿ ನೆನ್ನೆ ಶಿಶು ಭಾರತಿ ಉನ್ನತಿಕರಣ ಸಮಿತಿಯ ಸಭೆ ಹಿರಿಯ ವಿದ್ಯಾರ್ಥಿ ಬಳಗದ ಕಾರ್ಯಾಲಯದಲ್ಲಿ ನಡೆಯಿತು.**

**ಸಭೆಯಲ್ಲಿ ಶ್ರೀ ನಿರ್ಮಲ್ ಕುಮಾರ್ ಕಾರ್ಯದರ್ಶಿ ಜನಸೇವಾ ವಿದ್ಯಾ ಕೇಂದ್ರ, ಶಿಶು ಭಾರತಿ ಉನ್ನತೀಕರಣ ಸಮಿತಿಯ ಸದಸ್ಯರು ಹಾಗೂ ಜನಸೇವಾ ವಿದ್ಯಾಕೇಂದ್ರ ಹಿರಿಯ ವಿದ್ಯಾರ್ಥಿ ಬಳಗದ ಸದಸ್ಯರು ಭಾಗವಹಿಸಿದ್ದರು.**

**ಶ್ರೀಯುತ ಜಗದೀಶ್ ಅವರು ಒಂದು ಮಾದರಿ ಶಿಶು ಭಾರತಿ ಅನ್ನು ಹೇಗೆ ಮಾಡಬಹುದು ಅನ್ನುವುದಕ್ಕೆ ಮಾರ್ಗದರ್ಶನ ಕೊಟ್ಟರು.**

**Nov 2021 - ಹಿರಿಯ ವಿದ್ಯಾರ್ಥಿ ಬಳಗದ ಸ್ನೇಹ ಕೂಟ ವನ್ನು ಬೆಂಗಳೂರಿನಲ್ಲಿ ಏರ್ಪಡಿಸಲಾಯಿತು. ಕರ್ನಾಟಕದ ಎಲ್ಲ ಜಿಲ್ಲೆಗಳಿಂದ ಹಿರಿಯ ವಿದ್ಯಾರ್ಥಿಗಳು ಭಾಗವಹಿಸಿದ್ದರು**



ಓಂ ಗುರುಭ್ಯೋನಮಃ ~ ಜೈ ಶ್ರೀ ರಾಮ್
ಜನಸೇವಾ ವಿದ್ಯಾಕೇಂದ್ರ ಹಿರಿಯ ವಿದ್ಯಾರ್ಥಿ ಬಳಗದ ~ ಈ ಪತ್ರಿಕೆ
ಬಳಗದ ಬೆಳಕು
Janaseva Vidya Kendra Hiriya Vidyarthi Balaga (Alumni)
Hiriya, Vidyarthi Balaga Karayalya, Magadi Main Road, 20th mile, Chanenahalli, Bengaluru 562130

# ಹಿರಿಯ ವಿದ್ಯಾರ್ಥಿ ಬಳಗದ ಕಾರ್ಯಚಟುವಟಿಕೆಗಳು






**20 - 21 NOV 2021 -** ವಾರ್ಷಿಕ ರುದ್ರ ಹೋಮ

ಶ್ರೀ ಸುಬ್ಬರಾಮ ಶೆಟ್ಟಿ ದಂಪತಿಗಳನ್ನು ಜನಸೇವಾ ವಿದ್ಯಾಕೇಂದ್ರ ಹಿರಿಯ ವಿದ್ಯಾರ್ಥಿ ಬಳಗದ ಸದಸ್ಯರು ಶಾಲು ಪೇಟಾ ಹಣ್ಣಿನ ಬುಟ್ಟಿ ಕೊಟ್ಟು ಸನ್ಮಾನಿಸಿದರು

ಪ್ರತಿವರ್ಷವೂ ನವೆಂಬರ್ ತಿಂಗಳಲ್ಲಿ ಜನಸೇವಾದಲ್ಲಿ ರುದ್ರ ಹೋಮವನ್ನು ಹಿರಿಯ ವಿದ್ಯಾರ್ಥಿಗಳ ಒಳತಿಗಾಗಿ ಹಮ್ಮಿಕೊಳ್ಳಲಾಗುತ್ತಿದೆ ಈ ರುದ್ರ ಹೋಮದಲ್ಲಿ ಪ್ರತಿವರ್ಷವೂ ಓರ್ವ ಹಿರಿಯ ವಿದ್ಯಾರ್ಥಿ ದಂಪತಿಗಳನ್ನು ಕೂರಿಸಿ ರುದ್ರ ಹೋಮವನ್ನು ನೆರವೇರಿಸಲಾಗುತ್ತದೆ.

**Nov. 2021 - initiative: psycho synthesis Bhagavadgeete and psycho syntesis of Ramayana by RGB sir on every sunday 4.30 PM**









**3 December 2021 -** ಜನಸೇವಾ ವಿಶ್ವಸ್ತ ಮಂಡಳಿಯ ಪೂರ್ಣ ಮಂಡಲೋತ್ಸವ ( ಸ್ವರ್ಣ ಜಯಂತಿ) ಸ್ವಾಗತ ಸಮಿತಿಯ ಸಭೆ ಇಂದು ಜನಸೇವಾದಲ್ಲಿ ನಡೆಯಿತು. ಸ್ವಾಗತ ಸಮಿತಿಯ ಗೌರವಾಧ್ಯಕ್ಷರಾಗಿ ಮೈಸೂರಿನ ರಾಜರಾದ ಶ್ರೀ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಮಾರ್ಗದರ್ಶನ ಮಾಡಲಿದ್ದಾರೆ

First press meet on the occasion of Golden Jubilee celebration of Janaseva Vidyakendra

**FEB - MAR - APRIL 2022 -**

**Arrangment of Additional Tution for SSLC students that gave 100% result**



ENT (CCERF)

| RESULTS | BOYS | GIRLS |
|---|---|---|
| DISTINCTION | 28 | 1 |
| 1 st CLASS | 43 | 0 |
| 2 nd CLASS | 4 | 0 |
| PASS CLASS | 0 | 0 |



# ಹಿರಿಯ ವಿದ್ಯಾರ್ಥಿ ಬಳಗದ ವಿಭಾಗೀಯ ಬೈಠಕ್ - ಹೊಸಪೇಟೆ ವಿಭಾಗ

**23rd April 2022**




Hirya Vidyarthi Balaga Zonal Meet on 23Apr2022 10.00 AM at Hosapete

Program inauguration followed by Prastavika session by Acharya Dr Ramachandra Ganapathi Bhat, Chairman, Veda Vijnana Gurukul, Trustee, Janaseva Trust





Participants

Group Photos



ಓಂ ಗುರುಭ್ಯೋನಮಃ ~ ಜೈ ಶ್ರೀ ರಾಮ್
ಜನಸೇವಾ ವಿದ್ಯಾಕೇಂದ್ರ ಹಿರಿಯ ವಿದ್ಯಾರ್ಥಿ ಬಳಗದ ~ ಈ ಪತ್ರಿಕೆ
ಬಳಗದ ಬೆಳಕು
Janaseva Vidya Kendra Hiriya Vidyarthi Balaga (Alumni)
Hiriya Vidyarthi Balaga Karayalya, Magadi Main Road, 20th mile, Chanenahalli, Bengaluru 562130

# ಹಿರಿಯ ವಿದ್ಯಾರ್ಥಿ ಬಳಗದ ವಿಭಾಗೀಯ ಬೈಠಕ್ - ಮೈಸೂರು ವಿಭಾಗ

**29th May 2022**






**Part 1: Program inauguration followed by Prastavika session by Acharya Dr Ramachandra Ganapathi Bhat, Chairman, Veda Vijnana Gurukul, Trustee, Janaseva Trust**











Part 2: Alumni introduction session

Part 3: Q&A session followed by concluding session by Shri Nirmal Kumar ji, Honorable Secretary, Janaseva Trust.





# FORTHCOMING EVENTS

# ಮುಂಬರುವ ಕಾರ್ಯಕ್ರಮಗಳು

| Date | Event |
|---|---|
| **18th & 19th June 2022 / Sat-Sun ಶನಿವಾರ / ಭಾನುವಾರ.** | **Third JSVK Zonal Meet - Dharwad Zone**<br>**Venue: Dharwad Pradeshika Vijnana kendra, Karnataka university, Dharwad.**<br><br>**Districts** covered under **Dharwad** Zone are : **Hubli Dharwad, Haveri, Gadag, & Uttara Kannada/Karwar.**<br><br>For details Please click on below link: |
| **16th & 17th July 2022 Sat-Sun ಶನಿವಾರ / ಭಾನುವಾರ.** | **4th JSVK Zonal Meet - Kalyana Karnataka Zone**<br><br>**Venue: To Be Announced**<br><br>**Districts** covered under **Kalyana** Zone are : **Bidar, Kalburgi,** |
| **6th & 7th Aug 2022 Sat-Sun ಶನಿವಾರ / ಭಾನುವಾರ.** | **5th JSVK Zonal Meet - Mangaluru Zone**<br><br>**Venue: To Be Announced**<br><br>**Districts** covered under **Mangaluru** Zone are : **Udupi, Mangaluru,** |
| **21st & 22nd Aug 2022 Sat-Sun ಶನಿವಾರ / ಭಾನುವಾರ.** | **Varishaka Rudrahoma**<br><br>**Venue: Janaseva Vidyakendra Campus** |


# FORTHCOMING EVENTS

# ಮುಂಬರುವ ಕಾರ್ಯಕ್ರಮಗಳು

| Date | Event |
|---|---|
| **24th & 25th Sep 2022 Sat-Sun** ಶನಿವಾರ / ಭಾನುವಾರ. | **6th JSVK Zonal Meet - Chikmagaluru Zone**<br><br>**Venue: To Be Announced**<br><br>**Districts** covered under **Chikmagaluru** Zone are : **Chikmagaluru, Shimoga** |
| **22nd & 23rd Oct 2022 Sat-Sun** ಶನಿವಾರ / ಭಾನುವಾರ. | **7th JSVK Zonal Meet - Belgaum Zone**<br><br>**Venue: To Be Announced**<br><br>**District** covered under **Belgaum** Zone are : **Belgaum** |
| **19th & 20th Nov 2022 Sat-Sun** ಶನಿವಾರ / ಭಾನುವಾರ. | **8th JSVK Zonal Mee t- Tumkur Zone**<br><br>**Venue: To Be Announced**<br><br>**District** covered under **Tumkur** Zone are : **Tumkur** |
| **Dec 2022** | **Final JSVK Zonal Meet - Bengaluru**<br><br>**Dates/Venue To Be Announced.** |


# Madhavrao Sadashivrao Golwalkar

# ಮಾಧವರಾವ್ ಸದಾಶಿವರಾವ್ ಗೋಳ್ವಲ್ಕರ್



# S u r y a N a m a s k a r a

# ಸೂರ್ಯನಮಸ್ಕಾರ




## ನಮ್ಮ ನೆಚ್ಚಿನ ಡಾ. ರಾಮಚಂದ್ರ ಭಟ್ ಕೋಟೆಮನೆಯವರ ವಿಶ್ವ ಯೋಗದಿನದ ಸಂದೇಶ

ಈ ಸಾರಿ ವಿಶ್ವ ಯೋಗದಿನಾಚರಣೆಯ ಪ್ರಯುಕ್ತ ಪ್ರಧಾನಮಂತ್ರಿ ಮೋದಿಯವರು ನಮ್ಮ ಮೈಸೂರಿನಲ್ಲಿ ಆಚರಿಸುವರಿದ್ದಾರೆ. ಎಲ್ಲ ಜನಸೇವಾ ಹಿರಿಯ ವಿದ್ಯಾರ್ಥಿಗಳು ತಮ್ಮ ತಮ್ಮ ಪ್ರದೇಶಗಳಲ್ಲಿ ಆಸನ, ಸೂರ್ಯನಮಸ್ಕಾರ ಹಾಗು ಧ್ಯಾನ ಕಾರ್ಯಕ್ರಮಗಳಲ್ಲಿ ಭಾಗವಹಿಸಿ. ಈಗಿನ ಕಾಲಘಟ್ಟದಲ್ಲಿ ಸಮಾಜದ ಸಾಮರಸ್ಯಕ್ಕಾಗಿ ಯೋಗ ಹಾಗು ಧ್ಯಾನ ಪ್ರಪಂಚಕ್ಕೆ ಹಿಂದೆಂದಿಗಿಂತಲೂ ಅವಶ್ಯಕ. ಈ ವಿಶ್ವ ಯೋಗದಿನವನ್ನು ಜನಸೇವಾದ ಪೂರ್ಣಮಂಡಲ ಉತ್ಸವದ ಭಾಗವಾಗಿ ನಾವೆಲ್ಲರೂ ಆಚರಿಸೋಣ.